ಅಧ್ಯಕ್ಷರು : ಇದಕ್ಕೆ ಉತ್ತರವನ್ನು ಮಾನ್ಯ ನೀರಾವರಿ ಸಚಿವರು ಬಂದ ನಂತರ ಕೊಡುತ್ತಾರೆ. ಮಾನ್ಯ ಶ್ರೀ ವಿ. ಶ್ರೀನಿವಾಸ ಪ್ರಸಾದ್‌ರವರು ಮಾತನಾಡಿ. ಅದಕ್ಕೂ ಮುನ್ನ ಒಂದು ಚಿಕ್ಕ ಪ್ರಕಟಣೆಯಿದ್ದು, ಅದನ್ನು ಓದುತ್ತೇನೆ.

2. ಪ್ರಕಟಣೆ :

ಅಧ್ಯಕ್ಷರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಸವಣ್ಣನವರ 15 ವಚನ ಸಂಪುಟದ ಒಂದು ಸೆಟ್ಟನ್ನು ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ನೀಡಲಾಗುತ್ತಿದ್ದು, ಸದರಿ ಸಂಪುಟಗಳ ಪ್ರತಿಗಳನ್ನು ವಿಧಾನ ಸೌಧದ ಮೊದಲನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 129 ರಲ್ಲಿ ಪಡೆದುಕೊಳ್ಳಬಹುದೆಂದು ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ತಿಳಿಸಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ.

3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ :

ವಿಷಯ : ಕೇಂದ್ರ ಸರ್ಕಾರವು 2012–13ನೇ ಸಾಲಿನಿಂದ ಜಾರಿಗೆ ತಂದಿರುವ ಆರ್.ಟಿ.ಇ. ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿರುವ ವಿಚಾರದ ಬಗ್ಗೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಶಿಕ್ಷಣ ಹಕ್ಕು ಕಾಯಿದೆ ಕೇಂದ್ರ ಸರ್ಕಾರದ ಒಂದು ಮಹತ್ತರವಾದ ಕಾಯಿದೆಯಾಗಿದೆ. ಇದನ್ನು ಕಡ್ಡಾಯ ಮತ್ತು ಉಚಿತ ಶಿಕ್ಷಣ Compulsory and Free Education ಹಿನ್ನೆಲೆಯಲ್ಲಿ 6 ರಿಂದ 14 ವರ್ಷದ ಮಕ್ಕಳಿಗೆ ಒಂದರಿಂದ ಎಂಟನೇ ತರಗತಿಯವರೆಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಬೇಕೆಂಬ ಕಾಯಿದೆಯನ್ನು ಅನುಷ್ಠಾನಕ್ಕೆ ತರುವುದು ಮತ್ತು ಜಾರಿಗೊಳಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಇದೊಂದು ಬಹಳ ಮಹತ್ತರವಾದ ಕಾಯಿದೆಯಾಗಿದೆ. ಶಿಕ್ಷಣ ಎಂದರೆ ತಿಳುವಳಿಕೆ ಜ್ಞಾನ ಎಂದು ಅರ್ಥ. Education is nothing but knowledge. ಹಾಗಾಗಿ ಪ್ರತಿಯೊಂದು ಮಗುವಿಗೂ ಸಹ ಶಿಕ್ಷಣ ಸಿಗಬೇಕಾಗಿರುವುದು ಆ ಮಗುವಿನ ಮೂಲಭೂತ ಹಕ್ಕಾಗಿದೆ. Fundamental Right ಯಾವುದೇ ಮಗು ಯಾವುದೇ

ಕಾರಣಕ್ಕೂ ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶವಾಗಿದ್ದು, ಬಹಳ ವರ್ಷದಿಂದ ಸರ್ಕಾರದ ಘೋಷಣೆ ಕೂಡ ಇದೆ ಆಗಿದೆ. Education for all ಎಲ್ಲರಿಗೂ ಕೂಡ ಶಿಕ್ಷಣವನ್ನು ನಾವು ಕೊಡಬೇಕೆಂಬ ಹಿನ್ನೆಲೆಯಲ್ಲಿ ಈ ಒಂದು ಶಿಕ್ಷಣ ವ್ಯವಸ್ಥೆ ಅಂದರೆ Right to Education Act ಬಂದಿದೆ. ಬಹುಶಃ ಇದರ ಹಿನ್ನೆಲೆಯಲ್ಲಿ ಯೋಚನೆ ಮಾಡಿದಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯ ಸಂಘರ್ಷ, ಸ್ವಾತಂತ್ರ್ಯ ಬೇಕೆಂದು ಹೋರಾಟ ಮಾಡುವಂತಹ ಸಂದರ್ಭದಲ್ಲಿ ನಮಗೆ ಸ್ವಾತಂತ್ರ್ಯವನ್ನು ಕೊಡಬೇಕೋ ಬೇಡವೋ ಎಂಬ ಬಗ್ಗೆ ಇಂಗ್ಲೆಂಡ್‌ನಲ್ಲಿ ಚರ್ಚೆಯಾಗುತ್ತಿದ್ದು, ಆಗಿನ ಪ್ರಧಾನ ಮಂತ್ರಿಯಾಗಿದ್ದ Winston Churchill ರವರು ನಾವು ಸ್ವಾತಂತ್ರ್ಯಕ್ಕೆ ಅರ್ಹರೆ? ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆ? ಸ್ವಾತಂತ್ರ್ಯದ ಆಡಳಿತವನ್ನು ನಡೆಸುವಂಥ ಶಕ್ತಿ ಭಾರತೀಯರಿಗೆ ಇದೆಯೇ? ಎಂದು ಬಹಳ ಹಗುರವಾಗಿ ಮಾತನಾಡಿದ್ದರು. ಏಕೆಂದರೆ ಅವತ್ತು ನಮ್ಮಲ್ಲಿ 12 ರಿಂದ 15% ಮಾತ್ರ ಸಾಕ್ಷರತೆ ಪ್ರಮಾಣ ಇತ್ತು. ಹಾಗಾಗಿ ಭಾರತದಲ್ಲಿರುವ ಜನರು ಅನಕ್ಷರಸ್ಥರಾಗಿದ್ದಾರೆ, ಅನಾಗರಿಕತೆ ಇದೆ, ಮೌಢ್ಯತೆಗಳು, ಮೂಡ ನಂಬಿಕೆಗಳ ಜೊತೆಗೆ ಕಂದಾಚಾರಗಳು ಇದೆ. ಸದ್ಯಕ್ಕೆ ಸ್ವಾತಂತ್ರ್ಯ ಅವರಿಗೆ ಬೇಡ. ಸ್ವಾತಂತ್ರ್ಯದ ಕಲ್ಪನೆಯೇ ಅವರಿಗೆ ಗೊತ್ತಿಲ್ಲ ಎಂಬ ರೀತಿಯಲ್ಲಿ ಮಾತನಾಡಿದರು. ಸ್ವಾತಂತ್ರ್ಯ ಬಂದ ನಂತರ Winston Churchill ರವರು ಹೇಳಿದ ಮಾತು ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರ ಮನಸ್ಸಿನಲ್ಲಿ ರುತ್ತದೆ. ಹಾಗಾಗಿ ಅವರು ಸಂವಿಧಾನವನ್ನು ರಚನೆ ಮಾಡುವ ಸಂದರ್ಭದಲ್ಲಿ Directive Principles, ನೇರ ನಿರ್ದೇಶನಗಳಲ್ಲಿ Compulsory and Free Education ಬಗ್ಗೆ ಅವರು ಹೆಚ್ಚು ಒತ್ತೊತ್ತಿ ಹೇಳಿದ್ದಾರೆ. ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ಪ್ರತಿಯೊಬ್ಬರೂ ಕೂಡ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಭಾರತವನ್ನು ಕಟ್ಟತಕ್ಕಂತಹ ಒಂದು ಕನಸು ಜ್ಞಾನ ತಿಳುವಳಿಕೆಯಿಂದ ಆಗುವಂತಹದೆಂದು ಹೇಳಿ ಅವರು ಆ ಉದ್ದೇಶದಿಂದ ನೇರ ನಿರ್ದೇಶನದಲ್ಲಿ 5 ರಿಂದ 14 ವರ್ಷದ ಪ್ರತಿಯೊಂದು ಮಗುವಿಗೂ ಕೂಡ ಶಿಕ್ಷಣವನ್ನು ಕೊಡಬೇಕೆಂಬುದನ್ನು ಹೇಳಿದ್ದಾರೆ. ಬಹುಶಃ ಇದು ಹಿಂದೆಯೇ ಕಾಯಿದೆಯಾಗಿದೆ. 62 ವರ್ಷಗಳಲ್ಲಿ ಈ ದೇಶದ ಬೆಳವಣಿಗೆಯಲ್ಲೂ ಕೂಡ ಬದಲಾವಣೆಯಾಗುತ್ತಿದೆ. ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ. To know development in a society literature is

another proper indicator of economic development ಎಂದು ಹೇಳುತ್ತಾರೆ. ಅದು ಕಟು ಸತ್ಯವಾದುದು, ಯಾವ ಸಮಾಜದಲ್ಲಿ ಸಾಕ್ಷರತೆ ಜಾಸ್ತಿಯಿದೆಯೋ, ವಿದ್ಯಾವಂತರು ಜಾಸ್ತಿ ಇದ್ದಾರೋ, ಅಲ್ಲಿ ಸಹಜವಾಗಿ ಆರ್ಥಿಕವಾಗಿ ಬೆಳವಣಿಗೆಯನ್ನು ನಾವು ಕಾಣಬಹುದು. ಹಾಗಾಗಿ ಇವತ್ತು ಮಹತ್ತರವಾದ ಈ ಒಂದು ಕಾಯಿದೆಯನ್ನು ಜಾರಿಗೊಳಿಸುವುದು ನಮ್ಮ ಜವಾಬ್ದಾರಿ. ಸಂವಿಧಾನದಲ್ಲಿ ನೇರ ನಿರ್ದೇಶನದಲ್ಲಿರುವುದು ಇವತ್ತು Right to Education ಎಂಬ ಕಾಯಿದೆಯಾಗಿದೆ. ಪ್ರತಿಯೊಂದು ಮಗುವಿಗೂ ಕೂಡ ತಡವಾಗಿಯಾದರೂ ಶಿಕ್ಷಣವನ್ನು ಕೊಡಬೇಕು ಎಂದಿದೆ. ಈ ಮಹತ್ತರವಾದ ಒಂದು ಕಾಯಿದೆ ಕಾನೂನು ಆದಾಗ ಇದರ ಬಗ್ಗೆ ರಾಜ್ಯ ಸರ್ಕಾರ ಬಹಳ ಆಲೋಚನೆ ಮಾಡಬೇಕಾಗಿದೆ. ಇದು ಸರ್ಕಾರದ ಜವಾಬ್ದಾರಿಯಾಗಿದೆ. ನಮ್ಮಲ್ಲಿ ಎರಡು ರೀತಿಯ ಶಿಕ್ಷಣ ಇದೆ ಒಂದು ಖಾಸಗಿ ಶಾಲೆಗಳ ಜೊತೆಗೆ aided institution ಅಂದರೆ ಅನುದಾನ ಸಹಿತ ಶಾಲೆಗಳು ಮತ್ತು ಅನುದಾನ ರಹಿತ ಶಾಲೆಗಳೆಂದು ಇದೆ. ಈ ಒಂದು ಸರ್ಕಾರಿ ಶಾಲೆಗಳಲ್ಲಿ ಯಾವ ರೀತಿಯಾದ ಕಾಯಿದೆಗಳನ್ನು ಜಾರಿಗೆ ತರಬೇಕು ಹಾಗೂ ಯಾವ ರೀತಿಯಾದ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂಬ ಬಗ್ಗೆ ಗೊಂದಲವಿದೆ. ಈ ನಿಟ್ಟಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಕೂಡ ಬಂದಿದೆ. ಈ ಕಾಯಿದೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಜಾರಿಗೊಳಿಸುವುದು ಬಹಳ ಮುಖ್ಯವಾಗಿದೆ. ಮತ್ತು ಖಾಸಗಿ ಶಾಲೆಗಳಲ್ಲಿ ಅನುದಾನ ರಹಿತ ಶಾಲೆಗಳಲ್ಲಿ ಅಲ್ಪಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ, Right to Education ಕಾಯಿದೆಯಲ್ಲಿ social obligation ಅಂದರೆ ಸಾಮಾಜಿಕ ಹಂಗಿನಲ್ಲಿ ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳೂ ಕೂಡ 25% ಮೀಸಲಾತಿಯನ್ನು, admissions ನಲ್ಲಿ ಕೊಡಬೇಕೆಂಬುದು ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ಮಹತ್ತರವಾದ ತೀರ್ಪಿನಲ್ಲಿ ಕೂಡ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಶಿಕ್ಷಣ ಸಚಿವರ ಜೊತೆ ಎರಡು ರೀತಿಯಲ್ಲಿ ಚರ್ಚೆ ಮಾಡಬೇಕಾಗಿದೆ. ಗೊಂದಲಗಳ ನಡುವೆ ಕೂಡ ನೀವು ಉತ್ತಮವಾದ ಆಲೋಚನೆಗಳನ್ನು ಮಾಡಿ ತೀರ್ಮಾನವನ್ನು ತೆಗೆದು ಕೊಳ್ಳುತ್ತಿದ್ದೀರಿ ಅದನ್ನು ನಾವು ನೋಡುತ್ತಿದ್ದೇನೆ. ಇವತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆಯಾಯ ರಾಜ್ಯ ಭಾಷೆಯಲ್ಲಿ ಕೊಡಬೇಕೆಂಬ ಕಾಳಜಿ ತಮಗಿದ್ದರೂ ಕೂಡ ಪೋಷಕರು ಮನವಿ

ಮಾಡಿರುವುದು ಇವತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವ ರೀತಿ ಇದೆಯೆನ್ನುವುದು ಕೂಡ ನಮಗೆ ಗೊತ್ತಿದೆ. ಏಕ ಭಾಷೆ, ಏಕ ರೂಪ ಶಿಕ್ಷಣವನ್ನು ಕೊಡಬೇಕೆಂಬ ಬಗ್ಗೆ ಸಾಹಿತಿಗಳು, ಸಂಘಟನೆಗಳು ಯಾವ ರೀತಿ ವರ್ತಿಸುತ್ತಿದ್ದಾರೆ ಇದರ ಹಿನ್ನೆಲೆಯಲ್ಲೂ ಕೂಡ ತಾವು ಬಹಳ ಬುದ್ಧಿವಂತಿಕೆಯಿಂದ ಯೋಚನೆಯನ್ನು ಮಾಡುತ್ತಿದ್ದೀರಿ. ಹಾಗಾಗಿ ನಮಗೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕಾದರೆ, ನಮ್ಮಲ್ಲಿ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿನ ಸಾಕ್ಷರತೆ ನಮ್ಮಲ್ಲಿ ಇದೆ. 1951 ರ ಜನಗಣಪತಿ ಪ್ರಕಾರ ರಾಷ್ಟ್ರದ ಸಾಕ್ಷರತೆ 20.18% ಇತ್ತು. ಅವತ್ತು ಕೂಡ 20.60% ಹೆಚ್ಚಿತ್ತು. ಇವತ್ತಿನ ಜನಗಣತಿ ಪ್ರಕಾರ ರಾಷ್ಟ್ರೀಯ ಸರಾಸರಿ ಸಾಕ್ಷರತೆ 74% ಇದ್ದಾಗ ಕೂಡ ನಾವು 75.06% ಸಾಧನೆಯನ್ನು literacy ನಲ್ಲಿ ಮಾಡಿದ್ದೇವೆ. ಭಾರತ ದೇಶ ಸಾಕ್ಷರತೆಯ ಕ್ಷೇತ್ರದಲ್ಲಿ 94%, ನೂರಕ್ಕೆ ನೂರರಷ್ಟು ಸಾಧನೆಯನ್ನು ಮಾಡುವ ನಿಟ್ಟಿನಲ್ಲಿ ಅವರು ಪ್ರಯತ್ನವನ್ನು ಮಾಡುತ್ತಿದ್ದಾರೆ. ನಮ್ಮ ಗುರಿ ಕೂಡ ಹಾಗೆ ಇರಬೇಕು. ಸಾಕ್ಷರತೆಯಲ್ಲಿ 100% ಸಾಧನೆಯನ್ನು ಮಾಡಬೇಕು. ಅದಕ್ಕೆ Right to Education Act ಹಿನ್ನೆಲೆಯಲ್ಲಿ ಕೂಡ ಮಹತ್ತರವಾದ ಬೆಳವಣಿಗೆಗಳಾಗುತ್ತಿದೆಯೆಂಬುದನ್ನು ನಾನು ಹೇಳುತ್ತೇನೆ. ಸರ್ಕಾರಿ ಶಾಲೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನ Right to Education ಬಂದರೆ ಆಗಲಿಲ್ಲ ಅದನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ನಾನು ನಂತರ ಹೇಳುತ್ತೇನೆ. ಇವತ್ತು ಗಂಡ ಹೆಂಡತಿಯವರು ಹೊಟ್ಟೆಪಾಡಿಗಾಗಿ ದುಡಿದರೂ ಕೂಡ ಕುಟುಂಬದ ನಿರ್ವಹಣೆಗೆ ಸಾಕಾಗುವಷ್ಟು ಆದಾಯ ಸಿಗದಿರುವುದನ್ನು ನಾವು ನೋಡುತ್ತಿದ್ದೇವೆ. ಬಡತನ ರೇಖೆಗಿಂತ ಕೆಳಗೆ ವಾಸ ಮಾಡುವವರಿಗೆ ತಮ್ಮ ಹೊಟ್ಟೆಪಾಡು ಹಾಗೂ ತಮ್ಮ ಬದುಕು ಮುಖ್ಯವೇ ಹೊರತು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸ ಬೇಕೆನ್ನುವ ಯೋಚನೆ ಬಹಳ ಕಡಿಮೆಯಿರುವುದನ್ನು ನಾವು ನೋಡುತ್ತಿದ್ದೇವೆ. ಈ ಪೀಳಿಗೆಯಲ್ಲಿ ಮೊಟ್ಟಮೊದಲನೆಯದಾಗಿ ಶಿಕ್ಷಣವನ್ನು ಪಡೆಯುವಂತಹ ಕುಟುಂಬಗಳೂ ಕೂಡ ಇದೆ. ಅವರ ಬಗ್ಗೆ ಕೂಡ ನಾವು ಯೋಚನೆಯನ್ನು ಮಾಡಬೇಕು. ಆ ನಿಟ್ಟಿನಲ್ಲಿಯೂ ಕೂಡ ಯೋಚನೆ ಮಾಡಿ ಸರ್ಕಾರ ಅದಕ್ಕೆ ತಕ್ಕಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೂಡ ಕೊಡುತ್ತಿದೆ. ಮುಖ್ಯವಾಗಿ midday meals ಕೊಡುವಂತದ್ದು, ಇದರ ಬಗ್ಗೆ ಕೂಡ ನಾನು ಬಿಡಿಸಿ ಹೇಳುತ್ತೇನೆ. ಮುಖ್ಯವಾಗಿ ನಮ್ಮ ಮುಂದಿರುವ ಗೊಂದಲವೆಂದರೆ Right to

Education ನಲ್ಲಿ ಖಾಸಗಿ ಶಾಲೆಗಳಲ್ಲಿ ಅಲ್ಪಸಂಖ್ಯಾತರ ಶಾಲೆಗಳನ್ನು ಬಿಟ್ಟು ಮೀಸಲಾತಿಯನ್ನು 25% ರಷ್ಟು ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೊಟ್ಟಿರುವ ತೀರ್ಪಿನಲ್ಲಿ ಇಂದು ಗೊಂದಲವಿದೆ.

ತಾವು ಈ ಬಗ್ಗೆ ಸದನದಲ್ಲಿ ಏಕೆ ಈ ರೀತಿಯ ಹಾರಿಕೆ ಉತ್ತರ ಕೊಡುತ್ತೀರಿ ಎನ್ನುವುದು ಗೊತ್ತಿಲ್ಲ. ಈ ಬಗ್ಗೆ ಸದನದಲ್ಲಿ ಪ್ರಶ್ನೋತ್ತರ ವೇಳೆಯಲ್ಲಿಯೂ ಹಾಗೂ ಬೇರೆ ಸಮಯದಲ್ಲಿಯೂ ಕೂಡ ಚರ್ಚೆಯಾಗಿದೆ. ಖಾಸಗಿ ಶಾಲೆಗಳ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ, ಇತ್ತೀಚಿನ ಘಟನೆಗಳು ಮನಸ್ಸಿಗೆ ನೋವನ್ನುಂಟು ಮಾಡುವ ರೀತಿಯಲ್ಲಿ ನಡೆದಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಇಂದು ಗೆಜೆಟ್ ನೋಟಿಫಿಕೇಷನ್ ಮಾಡಿದ್ದೀರಿ. ಈ ಸಾಲಿನಲ್ಲೂ ಕೂಡ ಬಹಳ ಹೇಳಿದ್ದೀರಿ. ಶೇ.25ರಷ್ಟು ಯಾರಾದರೂ ಅಡ್ಮಿಷನ್ ಮಾಡುವ ಸಮಯದಲ್ಲಿ, ಸುಮಾರು ಒಂದು ಲಕ್ಷ ಸೀಟುಗಳನ್ನು ಮಕ್ಕಳಿಗೆ ಕೊಡಬೇಕು. ಖಾಸಗಿ ಶಾಲೆಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಸುಮಾರು 50,000 ಮಕ್ಕಳಿಗೆ ಪ್ರವೇಶಾವಕಾಶವನ್ನು ಕೊಡಿಸಿದ್ದೇವೆ. 2013–14ನೇ ಶೈಕ್ಷಣಿಕ ವರ್ಷದಲ್ಲಿ ಇನ್ನೂ 50,000 ಮಕ್ಕಳಿಗೆ ಕೊಡುತ್ತೇವೆಂದು ಹೇಳಲಾಗಿದೆ. ಇತ್ತೀಚೆಗೆ ನಡೆದಂತಹ ಘಟನೆಗಳ ಬಗ್ಗೆ ಮಾನ್ಯ ಸಚಿವರು ಹಾಗೂ ನಾವೆಲ್ಲರೂ ನಿರೀಕ್ಷೆ ಮಾಡಬೇಕು ಮಹಾಲಕ್ಷ್ಮೀ ಲೇಔಟ್‌ನ oxford ಶಾಲೆಯಿರಬಹುದು ಅಥವಾ ಕುಸ್ಮಾ (Karnataka Unaided School Management Association) ಇದರ ಅಧ್ಯಕ್ಷರಾದ ಶ್ರೀ ಶರ್ಮಾರವರು ನಡೆದುಕೊಂಡ ರೀತಿಯಿರಬಹುದು, ಇದು ಬಹಳ ಅವಮಾನವಾದಂತಹ, ಅನಾಗರಿಕವಾದಂತಹ, ಕಾನೂನು ಬಾಹಿರವಾದಂತಹ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಎಷ್ಟು ಅವಹೇಳನ ಮಾಡಿದ್ದಾರೆ, ಸಂವಿಧಾನದ ಆಶಯ ಏನಿದೆ Preamble of the Constitution, ಅದು ಸಮಾನತೆಗೂ ಎಂದು ಹೇಳಿರುವಂತಹದ್ದು. Every citizen is equal before the law ಎಂದು ಬಹಳ ಮುಖ್ಯವಾಗಿ ಹೇಳಿದ್ದಾರೆ. ಯಾವುದೇ ವ್ಯಕ್ತಿ, ಧರ್ಮ, ಜಾತಿ, ಬಡವ, ಬಲ್ಲಿದ ಎನ್ನದೆ ಅವರೆಲ್ಲರೂ ಸಮಾನವಾಗಿ ಗೌರವದಿಂದ ಬಾಳುವಂತಹ ಅವಕಾಶವನ್ನು ಸಂವಿಧಾನದಲ್ಲಿ ಕೊಟ್ಟಿದ್ದಾರೆ. ಕುಸ್ಮಾದ ಅಧ್ಯಕ್ಷರಾದ ಶ್ರೀ ಶರ್ಮಾ ಅವರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ? ಅವರು ಏನು ಹೇಳುತ್ತಾರೆಂದರೆ ಖಾಸಗಿ ಶಾಲೆಗಳಲ್ಲಿ ಬಹಳ affluent class ಮಕ್ಕಳೆ ಓದುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ

ತೀರ್ಪಿನ ಹಿನ್ನೆಲೆಯಲ್ಲಿ ಖಾಸಗಿ ಶಾಲೆಗಳಲ್ಲಿ ಶೇ. 25 ರಷ್ಟು under privileged, ಹಿಂದುಳಿದ ವರ್ಗದವರಿಗೆ, weaker section ಆಗಿರುವವರಿಗೆ ಸೀಟುಗಳನ್ನು ಕೊಡಬೇಕು. ಚರಂಡಿ ನೀರು, ಕೊಳಚೆ ನೀರನ್ನು ಸಮುದ್ರಕ್ಕೆ ಬಿಟ್ಟರೆ ಇಡೀ ಸಮುದ್ರದ ನೀರು ಕೂಡ ಕೊಳಚೆಯಾಗುತ್ತದೆ, ಮಲಿನವಾಗುತ್ತದೆಂದು ಎಂಬ ಹೇಳಿಕೆಯನ್ನು ಬಹಿರಂಗವಾಗಿ ಕೊಡುತ್ತಾರೆ. ಈ ಸಂದರ್ಭದಲ್ಲಿ ಸರ್ಕಾರದ ನಿಲುವೇನಾಗಿದೆ? Oxford ಶಾಲೆಯಲ್ಲಿ ಅಡ್ಮಿಷನ್ ಕೊಟ್ಟ ಮೇಲೆ ಅವರನ್ನು ಶಾಲೆಯೊಳಗೆ ಸಮಾನವಾಗಿ ಕೂರಿಸದೆ, ಅವರಿಗೆಲ್ಲಾ ಕೇಶ ಮುಂಡನ ಮಾಡಿ, ಕೂದಲೆಲ್ಲಾ ಕಟ್ ಮಾಡಿ ಅವಮಾನ ಮಾಡುವುದರಲ್ಲಿ ಸರ್ಕಾರದ ನಿಲುವೇನು? ಅಲ್ಲಿನ ಆಡಳಿತ ಮಂಡಳಿ ಮಕ್ಕಳನ್ನು ನೋಡಿಕೊಳ್ಳುವ ರೀತಿಯೇ ಇದು? ನಾವೆಲ್ಲಾ ತಲೆತಗ್ಗಿಸುವಂತಹ ರೀತಿಯಲ್ಲಿ ಘಟನೆಗಳು ನಡೆಯುತ್ತಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಸರ್ಕಾರ ಸ್ಪಷ್ಟವಾದ ಉತ್ತರವನ್ನು ಇದುವರೆಗೆ ಕೊಡದೇ, ಕೇವಲ ಹಾರಿಕೆ ಉತ್ತರವನ್ನು ಕೊಡುವ ರೀತಿಯಲ್ಲಿ ಆಗಬಾರದು. ಇದರಲ್ಲಿ ಸರ್ಕಾರವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಆಡಳಿತ ಮಂಡಳಿಗಳಿಗೆ ಎಚ್ಚರಿಕೆಯನ್ನು ಕೊಡಬೇಕು. ಕುಷ್ಮಾ ಅಧ್ಯಕ್ಷರಾದ ಶ್ರೀ ಶರ್ಮಾರವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ನೀವು ಅದರ ಬಗ್ಗೆ ಕಾರ್ಯೋನ್ಮುಖರಾಗಿದ್ದೀರಿ. ಈ ರೀತಿಯ ಘಟನೆಗಳ ಬಗ್ಗೆ ಗಮನ ಕೊಡಬೇಕಾದುದು ಬಹಳ ಮುಖ್ಯ. ಸಮಾಜದಲ್ಲಿ, ಪ್ರಜಾ ಪ್ರಭುತ್ವದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಬಹಳ ಅವಮಾನಕರವಾದ ರೀತಿಯಲ್ಲಿ ನಡೆದುಕೊಳ್ಳುತ್ತಿವೆ, ಇವುಗಳಿಗೆ ನೀವು ಎಚ್ಚರಿಕೆ ಕೊಡಬೇಕು. ಶೇ. 25 ರಷ್ಟು ಪ್ರವೇಶಾವಕಾಶ ಕೊಡುವುದಲ್ಲದೆ ಬೇರೆ ಮಕ್ಕಳ ರೀತಿಯಲ್ಲಿಯೇ, ಅದೇ ವಾತಾವರಣದಲ್ಲಿಯೇ, ಪ್ರೀತಿ ವಿಶ್ವಾಸದಿಂದಲೇ, ಅದೇ ರೀತಿಯಲ್ಲಿಯೇ ಓದಿಸುವಂತೆ ಅವರಿಗೆ ಎಚ್ಚರಿಕೆಯನ್ನು ಕೊಡಬೇಕು, ತಿಳಿವಳಿಕೆಯನ್ನು ಕೊಡಬೇಕು. ಯಾವುದೇ ಸಮಯದಲ್ಲಿ, ಸಂದರ್ಭದಲ್ಲಿ ತಾತ್ಸಾರ ಅಥವಾ ಉಲ್ಲಂಘನೆ ಮಾಡಿದರೆ ಅವರ ಮೇಲೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಲ್ಪಸಂಖ್ಯಾತರ ಶಾಲೆಗಳನ್ನು ಗುರುತಿಸುವುದರಲ್ಲಿ ನೀವು ಇನ್ನೂ ಕೂಡ ಗೊಂದಲದಲ್ಲಿದ್ದೀರಿ. ಖಾಸಗಿ ಶಾಲೆಗಳಲ್ಲಿ ಶೇ. 25ರಷ್ಟನ್ನು ಕೊಡಬೇಕೆನ್ನುವುದು ಆಗಿದೆಯೇ? ಬಹುಶಃ ಆಗಿದ್ದರೆ ಒಳ್ಳೆಯದು. ಬಹಳ

ಸ್ಪಷ್ಟವಾಗಿರಬೇಕು. ಮಕ್ಕಳಿಗೆ ಯಾವುದೇ ರೀತಿಯಲ್ಲಿ ಅವರ ಮನಸ್ಸಿಗೆ ನೋವಾಗದಂತೆ ಅವರಿಗೆ ಶಿಕ್ಷಣವನ್ನು ಕೊಡಬೇಕೆನ್ನುವುದನ್ನು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಸರ್ಕಾರದ ವತಿಯಿಂದ ಖಾಸಗಿ ಶಾಲೆಗಳಿಗೆ ಸಂಬಂಧಪಟ್ಟಿರುವುದಾಗಲಿ, RTE, ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು, ಶಿಕ್ಷಣದ ಹಕ್ಕನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಬಡವರಾದವರಿಗೆ ನಾವು ಕಾಯಿದೆಯನ್ನು ಜಾರಿಗೆ ತಂದಿದ್ದೇವೆ, ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಹೇಳುವುದಕ್ಕಾಗುವುದಿಲ್ಲ. ಬಡವರಿಗೆ ಬದುಕೇ ಕಷ್ಟವಾಗಿರುವಂತಹ ಸಂದರ್ಭದಲ್ಲಿ ಶಿಕ್ಷಣದ ಬಗ್ಗೆ ಯೋಚನೆ ಮಾಡುವಂತಹವರು ಕೆಲವರಿದ್ದಾರೆ. ಅವರೀಗೇನು ಮಾಡಬೇಕೆನ್ನುವುದು ಸರ್ಕಾರ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮಕ್ಕಳಿಗೆ ಎಲ್ಲಾ ರೀತಿಯ ಸೌಲಭ್ಯವನ್ನು ಸರ್ವ ಶಿಕ್ಷಣ ಅಭಿಯಾನದಡಿ ಕಡ್ಡಾಯ ಶಿಕ್ಷಣವನ್ನು ಕೊಡಬೇಕು, ಉಚಿತ ಶಿಕ್ಷಣವನ್ನು ಕೊಡುವುದು ಒಳೆಯ ಕಾರ್ಯಕ್ರಮ. ಯಾವುದೇ ಒಂದು ಮಗು ಕೂಡ ಸರ್ಕಾರಿ ಶಾಲೆಗಳಿಗೆ ಅಥವಾ ಅನುದಾನ ಬರುವಂತಹ ಶಾಲೆಗಳಿಗೆ ಹೋದರೆ ಅಲ್ಲಿ ಪಠ್ಯಪುಸ್ತಕಗಳನ್ನು, ಸಮವಸ್ತ್ರವನ್ನು, ಮಧ್ಯಾಹ್ನದ ಉಪಹಾರವನ್ನು ಉಚಿತವಾಗಿ ಕೊಡುವ ವ್ಯವಸ್ಥೆ ಇದೆ. ಹಿಂದುಳಿದ ವರ್ಗದ ಮಕ್ಕಳಿಗೆ, ಎಸ್.ಸಿ/ಎಸ್.ಟಿ. ಮಕ್ಕಳಿಗೆ 5ನೇ ತರಗತಿಯ ನಂತರ ವಿದ್ಯಾರ್ಥಿ ವೇತನವನ್ನು ಸಹ ಕೊಡುತ್ತೇವೆ., ಹಾಸ್ಟೆಲ್ ಸೌಲಭ್ಯವನ್ನು ಒದಗಿಸಲಾಗಿದೆ. ಈ ಒಂದು ಕಾಯಿದೆಯನ್ನು ಜಾರಿಗೆ ತರಬೇಕಾದರೆ ಎಲ್ಲಾ ರೀತಿಯ ಸವಲತ್ತು, ಸೌಲಭ್ಯಗಳು ಕೊಡುವ ಅವಕಾಶ ನಮಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಹಿನ್ನೆಲೆಯಲ್ಲಿ ಶಾಲೆಗಳಿಗೆ ಏನು ಬೇಕು ಎಂಬುದನ್ನು ಬಹುಶಃ ತಾವು ಒಪ್ಪಿಕೊಂಡಿದ್ದೀರಿ. ಇಂದು ಸುಮಾರು 14,000 ಶಿಕ್ಷಕರ ಕೊರತೆ ಇದೆ. ಈ ಕಾಯಿದೆ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಮೊದಲು ನೇಮಕ ಮಾಡಬೇಕು. ಯಾವುದೇ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರಬಾರದು. ಮತ್ತೇ ಅವರಿಗೆ ಕೊಠಡಿಗಳ ಕೊರತೆ ಯಾವ ಸಂದರ್ಭದಲ್ಲಿಯೂ ಇರಬಾರದು. ಪ್ರತಿಭಾ ಕಾರಂಜಿಯಲ್ಲಿಯೂ ಸಹ ಮಕ್ಕಳಿಗೆ ಎಲ್ಲಾ ರೀತಿಯ ಸೌಲಭ್ಯ ಕೊಡುವುದು ನಡೆಯುತ್ತಿದೆ. ಹಾಗಾಗಿ ನೀವು ಉಪಾಧ್ಯಾಯರ ನೇಮಕಾತಿಯನ್ನು ಸಹ ಮಾಡಬೇಕಾಗಿದೆ. ಮಧ್ಯಾಹ್ನದ ಉಪಹಾರದ ಬಗ್ಗೆ ಅನೇಕ ಸಂದರ್ಭಗಳಲ್ಲಿ ಹಾಗೂ ಬಜೆಟ್ ಮೇಲೆ ಭಾಷಣ ಮಾಡುವ ಸಂದರ್ಭದಲ್ಲಿ ಮಾನ್ಯ ಸಚಿವರ

ಗಮನಕ್ಕೆ ತಂದಿದ್ದೇವೆ. Mid-day meals ಏನಿದೆ ಇದನ್ನು ತಮಿಳುನಾಡು ರಾಜ್ಯದಲ್ಲಿ ಎಂ.ಜಿ. ರಾಮಚಂದ್ರನ್ ಅವರು ಜಾರಿಗೆ ತಂದಿರುವುದು. ರಾಮಚಂದ್ರನ್ ಅವರು ಓದುವಾಗ ಅವರ ತಾಯಿ ಮುಸುರೆ ತಿಕ್ಕುತ್ತಿದ್ದರು. ಶಾಲೆಗೆ ಹೋಗುವುದಕ್ಕೂ ಬಹಳ ಕಷ್ಟವಾಗುತ್ತಿತ್ತು. ಅವರು ಮುಖ್ಯ ಮಂತ್ರಿಯಾದ ನಂತರ ಇಂತಹ ಒಂದು ಒಳ್ಳೆಯ ಕಾರ್ಯಕ್ರಮವನ್ನು ಜಾರಿಗೆ ತಂದರು. ತಂದೆ ತಾಯಿಗಳು ದುಡಿಯುವುದಕ್ಕೆ ಗದ್ದೆಗಳಿಗೆ ಹೋದಾಗ, ಕೂಲಿಗೆ ಹೋದಾಗ ಮಕ್ಕಳು ಶಾಲೆಗೆ ಹೋಗುತ್ತಿರದೇ ಎಲ್ಲೋ ಇರುತ್ತಿದ್ದರು. ನಗರ ಪ್ರದೇಶಗಳಲ್ಲಿಯೂ ಹಳ್ಳಿಯ ವಾತಾವರಣವಿರುವ ಬಡಾವಣೆಗಳಿವೆ. ಅಲ್ಲೆಲ್ಲ ತಂದೆ ತಾಯಿಗಳು ಕೆಲಸಕ್ಕೆ ಹೋದರೆ ಮಕ್ಕಳಿಗೆ ಶಾಲೆಗೆ ಹೋಗುವ ಪರಿಜ್ಞಾನವೇ ಇರುತ್ತಿರಲಿಲ್ಲ, ತಂದೆ ತಾಯಿಗಳಿಗೂ ಸಹ ಅವರನ್ನು ಶಾಲೆಗೆ ಕಳುಹಿಸಬೇಕೆನ್ನುವುದು ಇರಲಿಲ್ಲ. ಮಕ್ಕಳಿಗೆ ಒಂದು ಹೊತ್ತು ಪೌಷ್ಟಿಕಾಂಶದ ಆಹಾರ ಸಿಗುತ್ತದೆ ಎನ್ನುವ ದೃಷ್ಟಿಯಿಂದಲಾದರೂ ಅವರನ್ನು ಶಾಲೆಗೆ ಕಳುಹಿಸಿದರೆ ಅವರಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಬೇಕು ಎನ್ನುವುದಕ್ಕೆ mid-day meals ಕಾರ್ಯಕ್ರಮ ಇರುವಂತಹದ್ದು. ನಾನೂ ಕೂಡ ಆಹಾರ ಸಚಿವನಾಗಿದ್ದೆ. ಕೇಂದ್ರ ಸರ್ಕಾರದಲ್ಲಿ ಉಚಿತವಾದಂತಹ ಆಹಾರವನ್ನು ಏನು ಕೊಡುತ್ತೇವೆ ಅದನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. Mid-day meals ಎಂದರೆ ಮಧ್ಯಾಹ್ನದ ಹೊತ್ತು ಒಂದು ತುತ್ತು ಊಟ ಹಾಕುವುದೇನಲ್ಲ. ಅದರ concept ಬೇರೆ. ತಾವು ಅದನ್ನು ಅರ್ಥಮಾಡಿ ಕೊಳ್ಳಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಸುಮಾರು ಇದರ ವೆಚ್ಚ 800 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಇದಕ್ಕೆ ಸುಮಾರು 600 ಕೋಟಿ ರೂ.ಗಳು ಬರುತ್ತದೆ. ಈ ಒಂದು ಮಹತ್ತರವಾದ ಯೋಜನೆಗೆ ರಾಜ್ಯ ಸರ್ಕಾರ 200 ಕೋಟಿ ರೂ.ಗಳನ್ನು ಕೊಡುತ್ತಿದೆ. ಇದು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಆಗಬೇಕು. ಇದರ ಜೊತೆಗೆ ಮಧ್ಯಾಹ್ನದ ಊಟಕ್ಕೆ ಬೇರೆ ಬೇರೆ ರೀತಿಯಲ್ಲಿ ಪೌಷ್ಟಿಕಾಂಶ ಹೊಂದಿರುವ ಆಹಾರವನ್ನು ಕೊಡಬೇಕೆನ್ನುವುದಿದೆ. ದಯವಿಟ್ಟು ಇದನ್ನು ಶಿಕ್ಷಣ ಇಲಾಖೆಯ ಜೊತೆಯಲ್ಲಿಡಬೇಡಿ. ಈ ಮಾತನ್ನು ಬಜೆಟ್ ಭಾಷಣ ಮಾಡುವಾಗಲೂ ಸಹ ಬಹಳ ಒತ್ತಿ ಹೇಳಿದ್ದೇನೆ. Mid-day meals programme ಏನಿದೆ ಇದಕ್ಕೆ ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ಮಾಡಿ. ಉಪಾಧ್ಯಾಯರುಗಳಿಗೆ ಶಿಕ್ಷಣದ ಜೊತೆಗೆ ಈ ಜವಾಬ್ದಾರಿಯನ್ನು ಕೊಡಬೇಡಿ. ಇದರಲ್ಲಿ ಯಾವ ರೀತಿಯ ಹಗರಣಗಳಾಗುತ್ತಿದೆ

ಎಂಬುದು ತಮಗೆ ಗೊತ್ತಿದೆ. ಶಿಕ್ಷಕರುಗಳ ಮೇಲೆ ಆಪಾದನೆ ಬರುವುದು, ಇದರಿಂದ ಅವರು ನೊಂದುಕೊಳ್ಳುವುದು, ಇದರ ಬಗ್ಗೆ ತುಂಬಾ ದೂರುಗಳು ಬರುವುದು. ಶಿಕ್ಷಕರಾದವರು ಉತ್ತಮವಾದ ರೀತಿಯಲ್ಲಿ ಶಿಕ್ಷಣವನ್ನು ಕೊಡಬೇಕು. ನಾವುಗಳು ಅವರ ಬಗ್ಗೆ ಈ ರೀತಿಯಲ್ಲಿ ಯೋಚನೆ ಮಾಡಬೇಕೇ ಹೊರತು, ಅವರಿಗೆ ಈ ಒಂದು ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಜವಾಬ್ದಾರಿಯನ್ನು ಕೊಡಬೇಡಿ. 800 ಕೋಟಿ ರೂ.ಗಳ ಈ ಒಂದು ಯೋಜನೆಗೆ ಪ್ರತ್ಯೇಕವಾದ ನಿರ್ದೇಶನಾಲಯವನ್ನು ಮಾಡಿದರೆ ಬಹಳ effective ಆಗಿ ನಡೆಯುತ್ತದೆ. ನನಗೆ ತಿಳಿದ ಮಟ್ಟಿಗೆ ಈ ಒಂದು ಯೋಜನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜೊತೆ ಸೇರಿಸಿದರೆ ಪರಿಣಾಮಕಾರಿಯಾಗಿ ನಡೆಯುತ್ತದೆ. ಇದಕ್ಕೆ ಪ್ರತ್ಯೇಕವಾದ ನಿರ್ದೇಶಕರಿರಲಿ, ನಿರ್ದೇಶನಾಲಯವಿರಲಿ ಆಗ ಈ ಕಾರ್ಯ ಕ್ರಮಗಳು ಪರಿಣಾಮಕಾರಿಯಾಗಿ ಯಶಸ್ವಿಯಾದ ರೀತಿಯಲ್ಲಿ ನಡೆಯುತ್ತದೆ. RTE background ನಲ್ಲಿ ಬಹಳ ಮುಖ್ಯವಾದಂತಹ ಕಾರ್ಯಕ್ರಮವಿದು. ನೀವು ಕೊಡುವಂತಹ ಪಠ್ಯ ಪುಸ್ತಕ, ಸಮವಸ್ತ್ರ, ವಿದ್ಯಾರ್ಥಿ ವೇತನ ಇವೆಲ್ಲದರ ಜೊತೆಗೆ, ಉಪಾಧ್ಯಾಯರುಗಳು, ಶಾಲಾ ಕೊಠಡಿಗಳು, ಶಾಲೆಗೆ ಪ್ರತಿಭಾ ಕಾರಂಜಿ, ಇದರ ಜೊತೆಯಲ್ಲಿ ಮಧ್ಯಾಹ್ನದ ಊಟದ ಬಗ್ಗೆಯೂ ತಾವು ಗಮನ ಹರಿಸಿ ಇದಕ್ಕೆ ಪ್ರತ್ಯೇಕ ವಾದಂತಹ ನಿರ್ದೇಶನಾಲಯವನ್ನು ತಾವು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಘನತೆವೆತ್ತ ರಾಷ್ಟ್ರಪತಿಗಳು ತಮ್ಮ ಮೊದಲನೇ ಭಾಷಣದಲ್ಲಿ ನಾವು ಏನೇ ಸಾಧನೆ ಮಾಡಿದರೂ ನಮ್ಮ ಸಾಧನೆಗಳ ಅಳತೆಗೋಲು ಶಿಕ್ಷಣವೇ, ಭಾರತದಲ್ಲಿ ಇನ್ನೊಂದು ಸುವರ್ಣ ಯುಗ ಬರೆಯಲು ಶಕ್ತಿಯಿರುವುದು ಶಿಕ್ಷಣಕ್ಕೆ ಮಾತ್ರ. ಆದ್ದರಿಂದ ನಮ್ಮ ಆದ್ಯತೆ ಶಿಕ್ಷಣವೇ ಎಂದು ಒತ್ತಿ ಹೇಳಿದರೆ ತಪ್ಪೇನಿಲ್ಲ.

ಹಾಗಾಗಿ ನಾವು ಈ Right to Education ಏನು ಬಂದಿದೆ ಇದರ ಹಿನ್ನೆಲೆಯಲ್ಲೂ ಕೂಡ ನಾವು ಇದರ ಬಗ್ಗೆ ಬಹಳ ಹೆಚ್ಚಿನ ಕಾಳಜಿಯನ್ನು ವಹಿಸಬೇಕು ಎನ್ನುವಂಥದ್ದು. ಮತ್ತೊಂದು ಶಿಕ್ಷಣದ ಬಗ್ಗೆ ಇವತ್ತು ಸ್ವಲ್ಪ ಗೊಂದಲವಿರತಕ್ಕಂಥದ್ದು. ನಿಮಗೆ ಅಲ್ಲಲ್ಲಿ ಸಂಘಟನೆಗಳು, ಸಾಹಿತ್ಯ ಪರಿಷತ್ತು, ಕನ್ನಡದ ದೊಡ್ಡ ದೊಡ್ಡ ಸಾಹಿತಿಗಳು, ಚಿಂತಕರು ಎಲ್ಲರೂ ಕೂಡ ತಮಗೆ ಮಾಧ್ಯಮದ ಬಗ್ಗೆ ಹೇಳಿದ್ದಾರೆ. ಅದು ಏನಾಗುತ್ತದೆಂದು ನಮಗೆ ಗೊತ್ತಿದೆ. ಈ ವಿಷಯವನ್ನು ಪ್ರಸ್ತಾಪ ಮಾಡಿದಾಗಲೂ ಕೂಡ ಬಹಳ

ಸ್ಪಷ್ಟವಾಗಿ ಹೇಳಿದ್ದೀರಿ. ಅದು ಹೈಕೋರ್ಟ್ ಮುಂದೆ ಇವತ್ತು ಇದೆ. ಪೋಷಕರು ತಮಗೆ ಬೇಕಾದಂಥ ರೀತಿಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವಂಥದ್ದನ್ನು ನಾವು ತೀರ್ಮಾನ ಮಾಡುತ್ತೇವೆನ್ನತಕ್ಕಂಥದ್ದು ಪೋಷಕರು ಇವತ್ತು ಹೈಕೋರ್ಟ್ ಮುಂದೆ ಹೋಗಿರುವಂಥದ್ದನ್ನು ನಾವು ಕಾಣುತ್ತೇವೆ. ಅದನ್ನು ನಾವು ಏನು ಮಾಡಿದ್ದೇವೆಂದರೆ, ಇವತ್ತು ಖಾಸಗಿ ಶಿಕ್ಷಣ ಶಾಲೆಗಳಿಗೆ ಆದಾಯ ಕಡಿಮೆ ಇರತಕ್ಕಂಥ ಬಡವರು ಕೂಡ ಇವತ್ತು ಆ ಕಡೆ ಯೋಚನೆ ಮಾಡುತ್ತಿದ್ದಾರೆ. ಉದಾಹರಣೆಗೆ, ಮಾನ್ಯ ವಿಶ್ವನಾಥ್ ರವರು ಶೀಕ್ಷಣ ಸಚಿವರು ಆಗಿದ್ದ ಸಮಯದಲ್ಲಿ ನಾನೇ, ಓದಿದಂಥ ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಂಡೆ. ತಾವು ಓದಿದಂಥ ಶಾಲೆಯ ಬಗ್ಗೆ ಸ್ವಲ್ಪ ಗಮನಕೊಡಿ, ತಿರುಗಿ ನೋಡಿ, ನಿಮ್ಮ ಶಿಕ್ಷಣ ಎಲ್ಲಿ ಪ್ರಾರಂಭವಾಯಿತು ಎನ್ನತಕ್ಕಂಥದ್ದನ್ನು. ತಮಗೆ ಹೇಳುತ್ತೇನೆ, ಕರ್ನಾಟಕದಲ್ಲಿ ಬಹಳ ಮಾದರಿಯಾದಂಥ ಶಾಲೆ ಮಾಡಬೇಕು. ಏಕೆಂದರೆ, ನಾವು ಒಂದೇ ಕಮ್ಯುನಿಟಿಯವರು ನೂರಕ್ಕೆ ನೂರರಷ್ಟು ದಲಿತರು ಓದಿದಂಥ ಶಾಲೆ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಮತ್ತು ವಿದ್ಯಾರ್ಥಿಗಳು ಇದ್ದಂಥ ಒಂದು ಬಡಾವಣೆ ಅದು ಮೈಸೂರು ನಗರದಲ್ಲಿದ್ದಾಗಲೂ ಕೂಡಾ. ಅದನ್ನು ಸುಮಾರು ಎಂ.ಪಿ. ಗಳು, ಎಂ.ಎಲ್.ಎ. ಗಳಿಂದ Philanthropist ಗಳಿಂದ ನಾನು ಸಹಾಯವನ್ನು ತೆಗೆದುಕೊಂಡು ಒಂದು ಕೋಟಿಗೂ ಹೆಚ್ಚು ಹಣವನ್ನು ಖರ್ಚು ಮಾಡಿ, ಅತ್ಯುತ್ತಮವಾದಂಥ ಸರ್ಕಾರಿ ಶಾಲೆಯನ್ನಾಗಿ ಮಾಡಿಕೊಟ್ಟಿದ್ದೇನೆ. ಆ ಶಾಲೆಗೆ ಅನುಕೂಲವಾಗಿ ಇರತಕ್ಕಂಥ ಶ್ರೀಮಂತರ ಮಕ್ಕಳು ಕಾನ್ವೆಂಟ್ ಶಾಲೆಗೆ ಹೋದರು ಕೂಡಾ ಒಬ್ಬ ಬಡ ಮಗುವು ಕೂಡ ನಮ್ಮಂಥವರ ಕಡೆ ಯೋಚನೆ ಮಾಡುತ್ತಾರೆ. ನಾನು ಹುಟ್ಟಿ ಬೆಳೆದಂಥದರಲ್ಲಿ ನಮ್ಮ ಒಬ್ಬ ವ್ಯಕ್ತಿ, ಒಬ್ಬ ಮುಖಂಡ ಇವತ್ತು ಇವನು ನಮಗೆ ಏನು ಮಾಡಿದ್ದಾನೆ ಎಂಬತಕ್ಕಂಥ ರೀತಿಯಲ್ಲಿ ಆ ಮಕ್ಕಳು ಯೋಚನೆ ಮಾಡಬಾರದು. ಇವನು ಕೂಡ ಬಡತನದಲ್ಲಿ ಬೆಳೆದಾಗ ಅಂಥ ಶಾಲೆಯಲ್ಲಿ ನಮಗೂ ಕೂಡ ಶ್ರೀಮಂತರ ಮಕ್ಕಳು ಓದಿದಂಥ ಶಾಲೆಯ ಸೌಲಭ್ಯಗಳು ಸಿಗಬೇಕು ಎನ್ನುವುದು ಆ ಮಗುವಿನಲ್ಲಿ ಬರಬಹುದೆಂದು ಹೇಳಿ, ನಾನು ಆ ಶಾಲೆಯನ್ನು ದತ್ತು ತೆಗೆದುಕೊಂಡೆ. ಅದು ಬಹಳ ಅತ್ಯುತ್ತಮವಾದ ಶಾಲೆಯಾಗಿದೆ. ಅದಕ್ಕೆ ಮಧ್ಯಾಹ್ನದ ಉಪಹಾರವನ್ನು ಇಸ್ಕಾನ್‌ನವರಿಗೆ ಹೇಳಿರುವಂಥದ್ದು ಇದೆ. ಆ ಮಕ್ಕಳಿಗೆ ಸರಿಯಾದ ಸಮಯದಲ್ಲಿ ಪಾಠ, ಪ್ರವಚನಗಳು, ಉಪಾಧ್ಯಾಯರು, ಅತ್ಯುತ್ತಮವಾದ ಕೊಠಡಿಗಳು, ಡೆಸ್ಟ್‌ಗಳು,

ಆರೋಗ್ಯ ತಪಾಸಣೆ, ಎಲ್ಲವನ್ನೂ ಮಾಡಿಸಿಕೊಟ್ಟರೂ ಕೂಡ ನನಗೆ ಆಶ್ಚರ್ಯವಾಗುತ್ತದೆ. ಅಲ್ಲಿ ಒಂದನೇ ಕ್ಲಾಸ್ admission ಗೆ ಏಳು ಮಕ್ಕಳು ಬಂದಿದ್ದಾರೆ. ಕಾನ್ವೆಂಟ್‌ಗಿಂತಲೂ ಎಲ್ಲಾ ಹೆಚ್ಚಿನ ಸೌಲಭ್ಯವನ್ನು ಕೊಟ್ಟು ಚೆನ್ನಾಗಿ ಆಸಕ್ತಿವಹಿಸಿ ಮಾಡುತ್ತಿದ್ದೇನೆ. ಆ ಪೋಷಕರ ಮನಸ್ಸಿನಲ್ಲಿ ನಮ್ಮ ಸರ್ಕಾರಿ ಶಾಲೆಗಳು ಅಂಥ ಹೇಳಿದರೆ ಒಂಥರವಾಗಿ, ನಮ್ಮ ಮಕ್ಕಳು ಇವತ್ತು ಬುದ್ಧಿವಂತರಾಗುವುದಿಲ್ಲ. ಅಲ್ಲಿ ಉಪಾಧ್ಯಾಯರು ಆಸಕ್ತಿ ವಹಿಸುವುದಿಲ್ಲ. ಒಳ್ಳೆಯ ಪಾಠ–ಪ್ರವಚನಗಳು ನಮ್ಮ ಮಕ್ಕಳಿಗೆ ಸರಿಯಾಗಿ ಸಿಗುವುದಿಲ್ಲವೆನೋ ಎನ್ನುವ ಪರಿಸ್ಥಿತಿ ಇವತ್ತು ಬಂದು ನಿಂತಿದೆ. ಹಾಗಾಗಿ ನೀವು ಯೋಚನೆ ಮಾಡಿದ್ದೀರಿ. ಇಂಗ್ಲೀಷ್ ಇವತ್ತು ಬೇಕಾಗಿದೆ. Globalization ಹಿನ್ನೆಲೆ, ಜಾಗತೀಕರಣದ ಹಿನ್ನೆಲೆಯಲ್ಲಿ ಇವತ್ತು ನಮಗೆ ಇಂಗ್ಲೀಷ್ ಒಂದು ಭಾಷೆಯಾಗಿ ಬೇಕಾಗಿದೆ ಎನ್ನುವುದನ್ನು ಮನಗಂಡು, ಇವತ್ತು ತಾವು ಒಂದನೆ ಕ್ಲಾಸಿನಿಂದ ಅದನ್ನು ಸೇರಿಸಿ. ಸಾಹಿತಿಗಳ ಒತ್ತಾಯ ಕೂಡಾ ಅಷ್ಟೇ. ಕನ್ನಡ ಪರ ಸಂಘಟನೆಗಳು, ಸಂಸ್ಥೆಗಳು ಎಲ್ಲವೂ ಕೂಡಾ ಪ್ರತಿಯೊಬ್ಬನೂ ಕೂಡ ಇವತ್ತು ನಮಗೆ ಒಂದು ಭಾಷೆಯಾಗಿ ಕಲಿಸುವುದರಲ್ಲಿ ಇಂಗ್ಲೀಷ್ ಅದರಲ್ಲಿ ಒಂದನೇ ಕ್ಲಾಸ್‌ನಿಂದ ಇಲ್ಲಿ ಇಲ್ಲ. ಇವತ್ತು ಮಾಧ್ಯಮದಲ್ಲಿ 6ನೇ ಕ್ಲಾಸ್‌ನಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಅದೂ ಕೂಡಾ ಬೇಕಾಗಿದೆ ಎನ್ನತಕ್ಕಂಥದ್ದು ಇದೆ. 6ನೇ ಕ್ಲಾಸ್‌ನಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಮಾಡಬೇಕು ಶಾಲೆಗಳನ್ನು. ಆದರೆ ಇಲ್ಲಿ ಮಾನ್ಯ ಸಚಿವರೆ ತಾವು ಇಲ್ಲಿ ಇಂಗ್ಲೀಷ್‌ನ್ನು ಕಲಿಸತಕ್ಕ ಉಪನ್ಯಾಸಕರ ಕೊರತೆ ಇದೆ ಎಂದು ಹೇಳುತ್ತೀರಿ. ಒಂದು ಮಗುವಿಗೆ ಒಂದು ಕಾನ್ವೆಂಟ್ ಶಾಲೆಯಲ್ಲಿ ಅತ್ಯುತ್ತಮವಾದಂಥ ವಿದ್ಯಾರ್ಥಿಯಾಗಿ ಮಾಡುತ್ತೀರೆಂದು ಹೇಳಿದರೆ, ನಾವು ಒಬ್ಬ ಅಧ್ಯಾಪಕನನ್ನು ಅತ್ಯುತ್ತಮವಾದಂಥ ಅಧ್ಯಾಪಕಾಗಿ, ಮೇಷ್ಟ್ರನನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲವೇನು? ಇಂಗ್ಲೀಷ್ ಪಾಠ ಮಾಡತಕ್ಕಂಥವರ ಕೊರತೆ ಇದೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಇಂಗ್ಲೀಷ್ ಪಾಠ ಮಾಡತಕ್ಕಂಥ ಮೇಷ್ಟ್ರುಗಳನ್ನು ತಾವು ಸರಿಯಾದಂಥ ರೀತಿಯಲ್ಲಿ ಈಗ ಏನು ಡಿ.ಎಡ್. ಮಾಡಿ ಬರುತ್ತಾರೆ ಅಥವಾ ಅನುಭವವಿರತಕ್ಕವರು, ಅಂಥಹವರಿಗೆ ಪ್ರತ್ಯೇಕವಾದಂಥ ರೀತಿಯಲ್ಲಿ ಅವರಿಗೂ ಕೂಡ ಬೇರೆ ಒಂದು ಕೋರ್ಸ್‌ಗಳನ್ನು ಅಥವಾ ತರಬೇತಿಯನ್ನು ಕೊಟ್ಟು ಉತ್ತಮವಾದಂಥ ರೀತಿಯಲ್ಲಿ ಇಂಗ್ಲೀಷನ್ನು ಅವರು ಪಾಠ ಮಾಡತಕ್ಕಂಥ ರೀತಿಯಲ್ಲಿ ತಯಾರು ಮಾಡಬೇಕು. ಇದರ

ವ್ಯಾಮೋಹ, ಅಂದರೆ ಇದರ ಅವಶ್ಯಕತೆ ಇವತ್ತು ಜನರಿಗೆ ಗೊತ್ತಾಗಿದೆ. ಪೋಷಕರಿಗೆ ಇಂಗ್ಲೀಷನ್ನು ಎಲ್ಲಿ ಹೇಳಿ ಕೊಡುತ್ತಾರೆ, ಎಲ್ಲಿ ಇಂಗ್ಲೀಷನ್ನು ಚೆನ್ನಾಗಿ ಹೇಳಿಕೊಡುತ್ತಾರೋ ಅಂಥ ಶಾಲೆಗಳ ಬಗ್ಗೆ ಅವರು ಗಮನವನ್ನು ಕೊಡುತ್ತಾರೆ, ಆಸಕ್ತಿಯನ್ನು ವಹಿಸುತ್ತಾರೆ ಎನ್ನುವುದನ್ನು ತಾವು ನೋಡುತ್ತಿದ್ದೀರಿ. ಬಹುಶಃ ತಾವು ಆ ಕಡೆ ಗಮನವನ್ನು ಕೊಡಬೇಕು. ಕೇವಲ ನೀವು ಇಂಗ್ಲೀಷನ್ನು ಒಂದನೇ ಕ್ಲಾಸ್‌ನಿಂದ ಒಂದು ಭಾಷೆಯಾಗಿ ಕಲಿಸುತ್ತೇವೆ, 6ನೇ ಕ್ಲಾಸ್‌ನಿಂದ ಆಂಗ್ಲ ಮಾಧ್ಯಮದಲ್ಲಿ ಕಲಿಸುತ್ತೇವೆಂದು ಅಷ್ಟಕ್ಕೆ ತೃಪ್ತಿಪಟ್ಟು ಕೊಳ್ಳಬಾರದು. ಬಹುಶಃ ಇದರ ಯೋಚನೆ ಮಾಡಬೇಕು. ಇದರ ಕೊರತೆ ತುಂಬಾ ಇದೆ. ಗಣಿತ, ಸೈನ್ಸ್ ಜೊತೆಗೆ ಇಂಗ್ಲೀಷಂತೂ ಬಹಳ ಕೊರತೆ ಇದೆ ಎನ್ನತಕ್ಕಂಥದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಬಹುಶಃ ಇದರಲ್ಲಿ ಕೂಡಾ ಯೋಚನೆ ಮಾಡಿದ್ದೀರಿ. ಆದರೆ ಯಾವುದೇ ಖಾಸಗಿ ಶಾಲೆಯ ಬಗ್ಗೆ ಹಾರಿಕೆ ಉತ್ತರ ಬೇಡ. ಮತ್ತೊಂದರ ಬಗ್ಗೆ ಬಹಳ ಗುರುತರವಾದ ಆಪಾದನೆ ಏನೂ ಇಲ್ಲ. ತಾವೂ ಮತ್ತು ಸುರೇಶಕುಮಾರ್ ರವರು ಬೆಳೆದಂಥ ವಾತಾವರಣ ಏನಿದೆ, ಬಂದಂಥದ್ದು. ತಮಗಾಗಿರತಕ್ಕಂಥ ಸಂಸ್ಕಾರದ ಹಿನ್ನೆಲೆಯಲ್ಲಿ ಇವತ್ತು ತಮಗೆ ಸಿಕ್ಕಂಥ ಅವಕಾಶಗಳೇನಿವೆ, ಸ್ವಲ್ಪ ಅದರಲ್ಲಿ ಅನೇಕರ ಲೇಖನಗಳನ್ನು ನೋಡಿದ್ದೇನೆ. Saffronage ಎಂದು ಹೇಳಿ, ಅದನ್ನು ಡಿಫೆಂಡ್ ಮಾಡಿಕೊಳ್ಳುತ್ತಾರೆ ಕಾಗೇರಿಯವರು ಅದನ್ನು ಏಕೆ ಆಗಬಾರದೆಂದು. ನಾವು ಭಗವದ್ಗೀತೆಯನ್ನು ಕಲಿಸುತ್ತೇವೆ. ಅದನ್ನು ಯಾಕೆ ಆಗಬಾರದೆಂದು ನಾನೇ ಹೋಗಿ ಅವರಿಗೆ ಹೇಳುತ್ತೇನೆ. ಸಂಸ್ಕೃತ ಶ್ಲೋಕಗಳನ್ನೇ ಹೇಳಬೇಕು, ಅದನ್ನು ಕಲಿಸಿ ಕೊಡುತ್ತೇವೆ. ಈ ರೀತಿಯಾದಂಥ ಹಿಡನ್ ಅಜೆಂಡಾ ನಿಮ್ಮ ಮೇಲಿದೆ. ಇದು ಇರಬಾರದು ಎನ್ನತಕ್ಕಂಥದ್ದಲ್ಲ. ಆದರೆ ನೀವು ಇಬ್ಬರು ಬಂದಿರತಕ್ಕಂಥ ಹಿನ್ನೆಲೆಯಲ್ಲಿ ನಿಮ್ಮದು ಒಂದು ಘೋಷಣೆ ಇದೆ. ಅದನ್ನು ನೀವು ಬಹಳ ಎಚ್ಚರಿಕೆಯಿಂದ ಸರ್ಕಾರಿ ಶಾಲೆಗಳು ಮತ್ತು ಖಾಸಗಿ ಶಾಲೆಗಳಲ್ಲಿ equal to all, appease to none ಎನ್ನತಕ್ಕಂಥದ್ದನ್ನು ಹೇಳುತ್ತೀರಿ. ಎಲ್ಲರಿಗೂ ಕೂಡಾ ಸಮಾನವಾದಂಥ ಅವಕಾಶ ಸಿಗಬೇಕು, ಯಾರಿಗೂ ಕೂಡಾ ಓಲೈಸುವುದು ಆಗಬಾರದು ಎನ್ನುವುದು. ಹಾಗಾಗಿ ಬಹುಶಃ ಪಠ್ಯ ಪುಸ್ತಕದಲ್ಲಿ ನಿಮ್ಮ ಮೇಲೆ ಏನು ಗುರುತರವಾದಂಥ ಆಪಾದನೆ ಏನಿದೆ, ಈ ಒಂದು ಕೇಸರೀಕರಣ ಮಾಡುತ್ತೀದ್ದೀರಿ, Saffronage ಆಗುವುದು ಬೇಡ. ಕಾಲ ಬದಲಾವಣೆಯಾಗಿ

21ನೇ ಶತಮಾನದಲ್ಲಿ ನಾವು ಇದ್ದೇವೆ. 21ನೇ ಶತಮಾನದಲ್ಲಿ, ಸುರೇಶ್ ಕುಮಾರ್‌ರವರೇ, ಮನುಷ್ಯನೇ ಆಶ್ಚರ್ಯ ಪಡುತ್ತಿದ್ದಾನೆ. ಬ್ರಹ್ಮಾಂಡ ಸೃಷ್ಟಿಯನ್ನು ಇವತ್ತು ನೋಡಿರತಕ್ಕಂಥದ್ದು. ವೈಜ್ಞಾನಿಕವಾಗಿ ಎಂಥ ಸಂಶೋಧನೆಯಾಗುತ್ತಿದೆ ಎನ್ನುವಂಥದ್ದನ್ನು, ವೈಜ್ಞಾನಿಕವಾದಂಥ ಯುಗ, ಸ್ಪರ್ಧಾತ್ಮಕವಾದಂಥ ಯುಗದಲ್ಲಿ ನಾವು ಎಲ್ಲರೂ ಕೂಡಾ ಇರತಕ್ಕಂಥದ್ದು ನಾಗರಿಕನೆ ಎನ್ನತಕ್ಕಂಥದ್ದು ನಾಗಾಲೋಟದಲ್ಲಿ ಓಡುತ್ತಿದೆ. ಇವತ್ತು 21ನೇ ಶತಮಾನದಲ್ಲಿ ನಾವು ಇದ್ದೇವೆ. ಇಲ್ಲಿ ಇಂಥ ಅದ್ಭುತ ಶಕ್ತಿ ನಮಗೆ ಇದೆಯೆಂದು ಹೇಳಿ ಮನುಷ್ಯನೇ ಆಶ್ಚರ್ಯ ಪಡುತ್ತಿದ್ದಾನೆ. ದಿನೇ ದಿನೇ ಅವನ ಮುಂದೆ ದೊಡ್ಡ ಸಂಶೋಧನೆಯ ಪ್ರಶ್ನೆಯೇ ಬಂದಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ ಇಂಥ ಸಂದರ್ಭದಲ್ಲಿ ಪಠ್ಯಪುಸ್ತಕಗಳಲ್ಲಿ ವಿಶೇಷವಾಗಿ ಮಕ್ಕಳಿಗೆ ಸ್ವಲ್ಪ ವೈಚಾರಿಕತೆಯ ಚಿಂತನೆಗಳು ಬರುತ್ತವೆ ವೈಚಾರಿಕತೆಗಾಗಿ, ವೈಜ್ಞಾನಿಕ ಚಿಂತನೆಗಳು ಇರಲಿ ವಾಸ್ತವದಲ್ಲಿ. Ground realitiesನಲ್ಲಿ ಇರತಕ್ಕಂಥದ್ದನ್ನು ನೀವು ಕೊಡಬೇಕು. ಬಹುಶಃ ಇದು ನಿಮ್ಮಿಂದ ನಾವು ಅಪೇಕ್ಷೆ ಮಾಡುವಂಥದ್ದು. ಈ Right to Education ಹಿನ್ನೆಲೆಯಲ್ಲಿ ಇದೂ ಕೂಡಾ ಬಹುಶಃ ನಿಮಗೆ ಬಹಳ ಮುಖ್ಯವಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ತಮಗೆ ತಿಳಿಸುತ್ತೇನೆ. ಹಾಗಾಗಿ ಕಾಯಿದೆಯ ಮಹತ್ತರವಾದಂಥ ಉದ್ದೇಶವನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ಯಾವುದೇ ಗೊಂದಲ ಇಲ್ಲದೇ ಇರತಕ್ಕಂಥ ರೀತಿಯಲ್ಲಿ, ಎಲ್ಲಾ ಮಕ್ಕಳಿಗೂ ಕೂಡಾ ಈ ಒಂದು ಏಕರೂಪ ಶಿಕ್ಷಣದ broad concept ನ ಹಿನ್ನೆಲೆಯಲ್ಲಿ ಬಹುಶಃ ಇದನ್ನು ಜಾರಿಗೊಳಿಸತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಅನುಷ್ಠಾನಕ್ಕೆ ತರತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕು. ಆದ್ದರಿಂದ ನಾನು ಇದನ್ನು ಸಂಪೂರ್ಣ ವಿಫಲವೆಂದು ಹೇಳಿ, ನಿಮ್ಮ ಗಮನವನ್ನು ಸೆಳೆಯುವುದಕ್ಕೋಸ್ಕರ, ತಾವೂ ಕೂಡಾ ಆ ದಿಕ್ಕಲ್ಲಿ ಆಸಕ್ತಿಯನ್ನು ವಹಿಸಿದ್ದೀರಿ. ಬಹಳ ಉತ್ಸುಕತೆಯಿಂದ ಇದ್ದೀರಿ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಈ ಕಾಯಿದೆ ಸಂಪೂರ್ಣವಾಗಿ ಜಾರಿಗೆ ಬಳಸುವ ರೀತಿಯಲ್ಲಿ ಆಗಬೇಕು. ನಮ್ಮ ದೇಶದಲ್ಲಿ ನಮ್ಮ ರಾಜ್ಯವೂ ಕೂಡಾ ನೂರಕ್ಕೆ ನೂರರಷ್ಟು ಸಾಕ್ಷರತೆಯ ಒಂದು ಸಾಧನೆಯನ್ನು ಮಾಡತಕ್ಕಂಥ ದಿಕ್ಕಿನಲ್ಲಿ ನೀವು ಪ್ರಯತ್ನವನ್ನು ಮಾಡಿದರೆ, ಮಾತ್ರ ಈ ಕಾಯಿದೆ ಬಂದಿರುವುದಕ್ಕೆ ಸಾರ್ಥಕವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು

ಈ ಸಂದರ್ಭದಲ್ಲಿ ತಮಗೆ ತಿಳಿಸಿ ಹೇಳಿ, ಇದಕ್ಕೆ ಉತ್ತರ ಕೊಡತಕ್ಕಂಥ ಸಂಧರ್ಭದಲ್ಲಿ ತಾವು ವಿಷಯಗಳನ್ನು ಮುಖ್ಯವಾಗಿ ಪ್ರಸ್ತಾಪ ಮಾಡ ಬೇಕೆಂದು ಹೇಳಿ ಸಭಾಧ್ಯಕ್ಷರೆ, ನಿಮಗೆ ನಮಸ್ಕಾರ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು. ಒಂದು ನಿಮಿಷ ಒಂದು ಪ್ರಕಟಣೆ ಇದೆ. ಆಮೇಲೆ ಮಾತನಾಡಿ.

4. ಪ್ರಕಟಣೆ :

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2012ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ದಿನಾಂಕ: 01.08.2012 ರಂದು ಯಾವುದೇ ತಿದ್ದುಪಡಿ ಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು : ಮಾತನಾಡಿ.

5. ನಿಯಮ 69ರ ಮೇರೆಗೆ ಸಾರ್ವನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ :

ಶ್ರೀ ಡಾ. ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ) : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು 61ನೇ ವರ್ಷದ ಸ್ವಾತಂತ್ರ್ಯದ ನಂತರ ಅಭಿನಂದಿಸಲಿಕ್ಕೆ ಬಯಸುತ್ತೇನೆ. ಕಾರಣ ಕೇಂದ್ರ ಮತ್ತು ರಾಜ್ಯಗಳು ಚರ್ಚೆ ಮಾಡಿ, ಸಂವಿಧಾನದ 45–46ನೇ ಕಲಂನಲ್ಲಿ 6 ರಿಂದ 14 ವರ್ಷ ತುಂಬಿರುವ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣವನ್ನು ಕೊಡಬೇಕು ಎನ್ನತಕ್ಕಂಥ Directive Principles ಏನಿತ್ತು, ಸಂವಿಧಾನದಲ್ಲಿ, 4ನೇ ಚಾಪ್ಟರ್‌ನಲ್ಲಿ, ಅದನ್ನು ರಾಜ್ಯ ಸರ್ಕಾರಗಳು ಕಡ್ಡಾಯವಾಗಿ ಜಾರಿ ಮಾಡ ಬಹುದು, ಮಾಡದೇ ಇರಬಹುದು ಎಂದು State subject ಆಗಿ ಅದನ್ನು ಪರಿಗಣಿಸಿ ಅಂದಿನ ಸಂವಿಧಾನದ ಪಿತಾಮಹಾರಾದ ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರು ಶಿಕ್ಷಣದ ಮಹತ್ವದ ಬಗ್ಗೆ, ಸರ್ವಾಂಗೀಣ ಅಭಿವೃದ್ಧಿ ಮತ್ತು ಬೆಳವಣಿಗೆ ಮತ್ತು ಜೀವನದ ಮಾರ್ಗೋಪಾಯಗಳನ್ನು ಕಂಡುಕೊಳ್ಳು ವುದಕ್ಕೆ ಇಂಥ ಒಂದು ಮಹತ್ತರವಾದಂಥ ವಿಷಯವನ್ನು ಸಂವಿಧಾನದ 45,